**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ 751/2021**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಧರ್ಮ | **ದಿನಾಂಕ** | ಃ | **26/02/2024** |
| ತಂದೆಯ ಹೆಸರು | ಃ | ದೇವಯ್ಯ | **ಸಿ ಡಬ್ಲ್ಯೂ** | ಃ | **05** |
| ವಯಸ್ಸು | ಃ | **24** ವರ್ಷ | **ಪಿ ಡಬ್ಲ್ಯೂ** | ಃ | **05** |
| ಉದ್ಯೋಗ | ಃ | ಚಾಲಕ | | | |
| ವಿಳಾಸ | ಃ | ಮರಡಿ ಗ್ರಾಮ | | | |

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಚಾಸಾ 1 ನನ್ನ ದೊಡ್ಡಪ್ಪನ ಮಗ, ಚಾಸಾ 2 ನನ್ನ ದೊಡ್ಡಮ್ಮ, ಚಾಸಾ 3 ಪಕ್ಕದ ಮನೆಯವರು. ಆರೋಪಿತರು ನನ್ನ ಸಂಬಂಧಿಕರು. ಈಗ್ಗೆ 1 ವರ್ಷದ ಹಿಂದೆ ನಾನು ರಾತ್ರಿ 9 ಗಂಟೆ ಸಮಯದಲ್ಲಿ ನನ್ನ ಮನೆಯಲ್ಲಿ ಇದ್ದಾಗ ನಮ್ಮ ಊರಿನವರು ನನಗೆ ಪೋನ್ ಮಾಡಿ 3 ನೇ ಆರೋಪಿ ಹಾಗೂ ಚಾಸಾ 1 ರವರು ಹಾಗೂ ಅಣ್ಣತಮ್ಮಂದಿರು ಜಗಳ ಮಾಡುತ್ತಿದ್ದಾರೆ ಎಂದು ತಿಳಿಸಿದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಜಗಳ ನಿಂತಿತ್ತು. ಚಾಸಾ 1 ರವರಿಗೆ ಹೊಡೆದಿದ್ದರು ಆದರೆ ಯಾರು ಹೊಡೆದಿದರು ಎಂದು ನನಗೆ ಗೊತ್ತಿಲ್ಲ. ನಾನು ಚಾಸಾ 1 ರಿಂದ 3 ರವರನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆ. ನಂತರ ಚಾಸಾ 1 ರಿಂದ 3 ರವರು ದೂರು ಕೊಟ್ಟಿರುತ್ತಾರೆ. ನಂತರ ಏನಾಯಿತು ಎಂದು ನನಗೆ ತಿಳಿಯಲಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟಿ ಸವಾಲು ಎಪಿಪಿಯವರಿಂದಃ**

ದಿಃ **14.04.2021** ರಂದು ರಾತ್ರಿ ಸುಮಾರು **8.00** ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇರುವಾಗ ನಮ್ಮ ಪಕ್ಕದ ಮನೆಯ ಚಾಸಾ **2** ರವರ ಮನೆಯ ಹತ್ತಿರ ಅವರ ಎರಡನೇ ಮಗ ಕೇಶವ ಎಂದರೆ **1** ನೇ ಆರೋಪಿ ಹಾಗೂ ಆತನ ಹೆಂಡತಿ ಎಂದರೆ **4** ನೇ ಆರೋಪಿ ಹಾಗೂ **3** ನೇ ಆರೋಪಿ ಹಾಗೂ **2** ನೇ ಆರೋಪಿ ಬಂದು ಜಮೀನು ಮತ್ತು ಮನೆಯನ್ನು ಅವರ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ಚಾಸಾ **2** ರವರಿಗೆ ಸಹಿ ಹಾಕುವಂತೆ ಹೇಳಿ ಗಲಾಟೆ ಮಾಡಿ ಚಾಸಾ **2** ರವರಿಗೆ

ಕೈಯಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ 1 ರವರು ಅಲ್ಲಿಗೆ ಬಂದರು ಹಾಗೂ ಚಾಸಾ 2 ರವರು ಅವರಿಗೆ ನಡೆದ ಘಟನೆಯನ್ನು ಹೇಳಿದಾಗ ಪೊಲೀಸ್ ಠಾಣೆಗೆ ದೂರು ಕೊಡಲೆಂದು ಚಾಸಾ 2 ರವರು ಹೋಗುತ್ತಿರುವಾಗ 3 ನೇ ಆರೋಪಿ ಹಾಗೂ 2 ನೇ ಆರೋಪಿ ಚಾಸಾ 2 ರವರನ್ನು ಹಿಡಿದುಕೊಂಡು ಅಪಮಾನವಾಗುವ ರೀತಿ ಎಳೆದಾಡಿ ಅವಾಚ್ಯ ಶಬ್ದದಲ್ಲಿ ಬೈದರು ಎಂದರೆ ನನಗೆ ಗೊತ್ತಿಲ್ಲ. ನಂತರ ಕೇಶವ ಕೈಯಿಂದ ಚಾಸಾ 2 ರವರ ಎಡಭುಜಕ್ಕೆ 2 ನೇ ಆರೋಪಿ ಕೈಯಿಂದ ಚಾಸಾ 2 ರವರ ಕುತ್ತಿಗೆ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿದರು ನನಗೆ ಗೊತ್ತಿಲ್ಲ. ಆಗ ಚಾಸಾ 1 ರವರು ಏಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಸದರಿಯವರು ಚಾಸಾ 1 ರವರನ್ನು ಏಕಾಏಕಿ ಹಿಡಿದು ಎಳೆದಾಡಿದರು ಹಾಗೂ 2 ನೇ ಆರೋಪಿ ಕೈಯಿಂದ ಚಾಸಾ 1 ರವರ ಎದೆಗೆ ಹೊಡೆದು ನೋವುಂಟು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಂತರ ಅರೋಪಿತರೆಲ್ಲರೂ ಚಾಸಾ 1 ರವರನ್ನು ಕೆಳಗೆ ಬೀಳಿಸಿ ಸಣ್ಣಯ್ಯನ ಮಗ ಕೇಶವ ದೊಣ್ಣೆಯಿಂದ ಚಾಸಾ 1 ರವರ ಎಡಗಾಲಿನ ಬೆರಳಿಗೆ ಹೊಡೆದು ನೋವುಂಟು ಮಾಡಿದ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಚಾಸಾ 1 ರವರ ಎಡಗಾಲಿನ ಬೆರಳಿಗೆ ಕಲ್ಲು ಎತ್ತಿಹಾಕಿ ನೋವುಂಟು ಮಾಡಿದ ಎಂದರೆ ನನಗೆ ಗೊತ್ತಿಲ್ಲ. ಆಗ ಅಲ್ಲಿಯೇ ಇದ್ದ ಚಾಸಾ 4 ರವರ ಹೆಂಡತಿ ಅಂದರೆ ಚಾಸಾ 3 ಜಗಳ ಬಿಡಿಸಲು ಹೋದಾಗ ಸಣ್ಣಯ್ಯ್ನ ಮಗ ಕೇಶವ ಚಾಸಾ 3 ರವರಿಗೆ ಅಪಮಾನವಾಗುವ ರೀತಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ನನಗೆ ಗೊತ್ತಿಲ್ಲ ಹಾಗೂ ಕಬ್ಬಿಣದ ರಾಡಿನಿಂದ ಸದರಿಯವರು ಚಾಸಾ 3 ರವರ ತಲೆಯ ಮಧ್ಯಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ ಎಂದರೆ ನನಗೆ ಗೊತ್ತಿಲ್ಲ. ಆಗ ಸಣ್ಣಯ್ಯನ ಮಗ ಕೇಶವ ಹಾಗೂ ಆತನ ಹೆಂಡತಿ 2 ನೇ ಆರೋಪಿ ಚಾಸಾ 3 ರವರಿಗೆ ಬಿಡುವುದಿಲ್ಲ ,ಕೊಲೆ ಮಾಡುತ್ತಾರೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಅಲ್ಲಿಯೇ ಇದ್ದ ನಾನು ಹಾಗೂ ಚಾಸಾ 4 ರವರು ಹೋಗಿ ಏಟಾಗಿದ್ದ ಚಾಸಾ 1 ರಿಂದ 3 ರವರನ್ನು ಒಂದು ವಾಹನದಲ್ಲಿ ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿ. ಗಲಾಟೆಯ ಬಗ್ಗೆ ಪಂಚಾಯಿತಿ ಮಾಡಿಕೊಳ್ಳೋಣ ಎಂದು ಸುಮ್ಮನಿದ್ದೇವೆ ಆದರೆ ಆರೋಪಿತರು ಪಂಚಾಯಿತಿಗೆ ಬರದೇ ಇದ್ದ ಕಾರಣ ಚಾಸಾ 1 ರವರು ದಿನಾಂಕ 20.04.2021 ರಂದು ತಡವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ನಂತರ ಪೊಲೀಸರು ಘಟನೆಯ ಕುರಿತಾಗಿ ನನ್ನ ವಿಚಾರಣೆ ಮಾಡಿರುತ್ತಾರೆ ಹಾಗೂ ನಾನು ಪೊಲೀಸರಿಗೆ ಹೇಳಿಕೆ

ನೀಡಿರುತ್ತೇನೆ ಎಂದರೆ ಸರಿ. ಈಗ ನನಗೆ ಓದಿ ಹೇಳಿದಂತೆ "ನಾನು ಮನೆಯಲ್ಲಿರುವಾಗ - - - - ಬೆದರಿಕೆ ಹಾಕಿದರು" ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯ ಭಾಗವನ್ನು ಅಲ್ಲಗಳೆದ ಕಾರಣ ಸದರಿ ಭಾಗವನ್ನು ನಿಪಿ 3 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಜಿ ಡಿ ಎಂ ವಕೀಲರಿಂದ ಆರೋಪಿತರ ಪರವಾಗಿಃ

ನಾನು ಚಾಸಾ 1 ರಿಂದ 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರಿಂದ 3 ರವರು ಅವರೇ ಬಿದ್ದು ಏಟು ಮಾಡಿಕೊಂಡಿರುತ್ತಾರೆ , ಆರೊಪಿತರು ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**